# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/147/2019/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 21/02/2022.

## ವಿಚಾರಣಾ ವರದಿ

**ಉಪಸ್ಥಿತರು:** **ಜಿ. ನಂಜುಂಡಯ್ಯ,**
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ **ಶ್ರೀ ಶ್ರೀನಿವಾಸ,** ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ **ಜಿಲ್ಲೆ** ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಬಿಜಿಎಂ/9469/2017/ಉನಿವಿ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 19/11/2018.

2. ಸರ್ಕಾರದ ಆದೇಶ ಸಂಖ್ಯೆ: ಸಿಐ 16 ಎಂಜಿಎಸ್ 2019, ಬೆಂಗಳೂರು, ದಿನಾಂಕ: 16/05/2019.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/147/2019, ಬೆಂಗಳೂರು ದಿನಾಂಕ: 24/05/2019.

* * * *

ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕ್ ಹಳೇ ತಹಶೀಲ್ದಾರ್ ಕಛೇರಿ ರಸ್ತೆ, ಕೇರಾಫ್ ಎಸ್.ಟಿ. ಪಾಟೀಲ್, ವಕೀಲರ ಮನೆ ನಿವಾಸಿಯಾದ **ಶ್ರೀ ಬಸವರಾಜ ಮಲ್ಲೇಶಪ್ಪ ಹೊನ್ನಣ್ಣನವರ** (ಇನ್ನು ಮುಂದೆ **"ದೂರುದಾರರು"** ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ದೂರಿನಲ್ಲಿ ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು (1) ತಹಶೀಲ್ದಾರರಾದ ಶ್ರೀ ಶಿವಾನಂದ ರಾಣೆ ಮತ್ತು (2) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿಯಾದ ಶ್ರೀ ಶ್ರೀನಿವಾಸ ರವರುಗಳ ವಿರುದ್ಧ ಕರ್ತವ್ಯ

ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದು, ದೂರಿನಲ್ಲಿ, ಶಿಗ್ಗಾಂವ ತಾಲ್ಲೂಕು ಬಂಕಾಪುರ ಉಪ ತಹಶೀಲ್ದಾರ್ ಕಾರ್ಯಾಲಯದ ವ್ಯಾಪ್ತಿಯ ಬಾಡಾ ಗ್ರಾಮದ ಸರ್ವೆ ನಂ. 54/3 ವಿಸ್ತೀರ್ಣ 4 ಎಕರೆ ಮತ್ತು ಸರ್ವೆ ನಂ. 54/7 ವಿಸ್ತೀರ್ಣ 2.4 ಎಕರೆ ಜಮೀನಿನ ಭಾಗಶ: ಜಾಗದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಸದರಿ ಅಕ್ರಮ ಗಣಿಗಾರಿಕೆಯನ್ನು ತಡೆಯುವಲ್ಲಿ ಎದುರುದಾರರು ಕರ್ತವ್ಯ ಲೋಪ ತೋರಿದ್ದಾರೆ ಮತ್ತು ರಾಜಸ್ವ ನಷ್ಟ ಮಾಡಿದ್ದಾರೆಂದು ಆರೋಪಿಸಿರುತ್ತಾರೆ,

2. ಮೇಲ್ಕಂಡಂತೆ ನೀಡಲಾದ ದೂರಿನ ಅಂಶಗಳನ್ನು ಪರಿಗಣಿಸಿ, ಎದುರುದಾರರಾದ ಶ್ರೀ ಶ್ರೀನಿವಾಸ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಹಾವೇರಿ ರವರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಎದುರುದಾರರ ವಿರುದ್ಧ ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 16/05/2019 ರಂದು, **ಶ್ರೀ ಶ್ರೀನಿವಾಸ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಹಾವೇರಿ** ಇವರ ವಿರುದ್ಧದ ಆರೋಪಗಳಿಗೆ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 24/05/2019 ರಂದು ಅಪರ ನಿಬಂಧಕರು, ವಿಚಾರಣೆಗಳು–10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 11/07/2019 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

***ಅನುಬಂಧ–1***

***ದೋಷಾರೋಪಣೆ–1***

1) ಶ್ರೀ. ಶ್ರೀನಿವಾಸ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಜಿಲ್ಲೆ ಆದ ನೀವು:

> " ಆಪಾದಿತ ಸರ್ಕಾರಿ ನೌಕರ ಶ್ರೀ **ಶ್ರೀನಿವಾಸ, ಹಿರಿಯ ಭೂ ವಿಜ್ಞಾನಿ,** ಗಣಿ ಮತ್ತು ಭೂವಿಜ್ಞಾನ ಇಲಾಖೆ, ಹಾವೇರಿ ಆದ ನೀವು, ಶಿಗ್ಗಾಂವ ತಾಲ್ಲೂಕ್ ಬಂಕಾಪುರ ಉಪ ತಹಶೀಲ್ದಾರ್ ಕಾರ್ಯಾಲಯದ ವ್ಯಾಪ್ತಿಯ ಬಾಡಾ ಗ್ರಾಮದ ಸರ್ವೆ ನಂ.54/3 ವಿಸ್ತೀರ್ಣ 4 ಎಕರೆ ಮತ್ತು ಸರ್ವೆ ನಂ.54/7 ವಿಸ್ತೀರ್ಣ 2.4 ಎಕರೆ ಜಮೀನಿನ ಭಾಗಶಃ ಜಾಗದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಸದರಿ ಅಕ್ರಮ ಗಣಿಗಾರಿಕೆಯನ್ನು ತಡೆಯುವಲ್ಲಿ ವಿಫಲರಾಗಿ ಕರ್ತವ್ಯ ಲೋಪ ತೋರಿದ್ದೀರಿ ಮತ್ತು ರಾಜಸ್ವಕ್ಕೆ ನಷ್ಟ ಉಂಟುಮಾಡಿದ್ದೀರಿ".
>
> ಆದಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ

ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(**1**)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

*ಅನುಬಂಧ-2*

**ದೋಷಾರೋಪಣೆಯ ವಿವರ**

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

2. ದೂರುದಾರ ಶ್ರೀ. ಬಸವರಾಜ ಮಲ್ಲೇಶಪ್ಪ ಹೊನ್ನಣ್ಣನವರ ರವರು ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕ್ ಹಳೇ ತಹಶೀಲ್ದಾರ್ ಕಛೇರಿ ರಸ್ತೆ ಕೇರಾಫ್.ಎಸ್.ಟಿ. ಪಾಟೀಲ್, ವಕೀಲರ ಮನೆ ರವರು ತಮ್ಮ ದೂರಿನಲ್ಲಿ ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು 1) ತಹಶೀಲ್ದಾರರಾದ **ಶ್ರೀ.ಶಿವಾನಂದ ರಾಣೆ** ಮತ್ತು 2) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿಯಾದ **ಶ್ರೀ.ಶ್ರೀನಿವಾಸ** ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿರುತ್ತದೆ.

3. ದೂರಿನ ಸಂಕ್ಷಿಪ್ತ ವಿವರಣೆ:- ಶಿಗ್ಗಾಂವ ತಾಲ್ಲೂಕ್ ಬಂಕಾಪುರ ಉಪ ತಹಶೀಲ್ದಾರ್ ಕಾರ್ಯಾಲಯದ ವ್ಯಾಪ್ತಿಯ ಬಾಡಾ ಗ್ರಾಮದ ಸರ್ವೆ ನಂ.54/3 ವಿಸ್ತೀರ್ಣ 4 ಎಕರೆ ಮತ್ತು ಸರ್ವೆ ನಂ.54/7 ವಿಸ್ತೀರ್ಣ 2.4 ಎಕರೆ ಜಮೀನಿನ ಭಾಗಶಃ ಜಾಗದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಸದರಿ ಅಕ್ರಮ ಗಣಿಗಾರಿಕೆಯನ್ನು ತಡೆಯುವಲ್ಲಿ ಎದುರುದಾರರು ಕರ್ತವ್ಯ ಲೋಪ ತೋರಿದ್ದಾರೆ ಮತ್ತು ರಾಜಸ್ವಕ್ಕೆ ನಷ್ಟ ಮಾಡಿದ್ದಾರೆಂದು ಹೇಳಿದ್ದಾರೆ.

4. ದೂರಿಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ತಾವು ದಿನಾಂಕ:12/08/16 ರಿಂದ ಶಿಗ್ಗಾಂವ ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದು, ಬಾಡಾ ಗ್ರಾಮದ ಸರ್ವೆ ನಂ.54/3 ವಿಸ್ತೀರ್ಣ 4 ಎಕರೆ ಜಮೀನನ್ನು ಅದರ ಮಾಲೀಕರಾದ ಶ್ರೀ.ರಮೇಶ ವೀರಭದ್ರಪ್ಪ ತಗ್ಗಿಹಳ್ಳಿ ರವರು ಜಿಲ್ಲಾಧಿಕಾರಿಗಳ ಆದೇಶದನ್ವಯ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಕೊಂಡು ಬಾಡಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಹಾನಗಲ್ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರವರಿಂದ ನಿರಾಪೇಕ್ಷಣಾ ಪತ್ರ ಪಡೆದಿದ್ದಾರೆ. ಸದರಿ ಜಮೀನಿನಲ್ಲಿ ಕಲ್ಲು ಗಣಿಗಾರಿಕೆ ಮಾಡಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ರವರಿಂದ ದಿನಾಂಕ:22/09/15ರಂದು ಅನುಮತಿಯನ್ನು ಪಡೆದುಕೊಂಡಿದ್ದಾರೆ. ಸರ್ವೆ ನಂ.54/3ರಲ್ಲಿ ಉದ್ದೇಶಿತ ಕೈಗಾರಿಕಾ ಸ್ಥಾಪನೆಯ ಜಾಗದ ಸುತ್ತಲಿನ ಪ್ರದೇಶದ ಕೃಷಿ ಜಮೀನು ವ್ಯಾಪ್ತಿಯಲ್ಲಿನ ರೈತರ ಕೃಷಿ ಕಾರ್ಯಕ್ಕೆ ತೊಂದರೆಯಾಗಿದೆಯೆಂದು ಸದರಿ ರೈತರು ತಮ್ಮ ಕಛೇರಿಗೆ ಈವರೆವಿಗೆ ಲಿಖಿತ ದೂರನ್ನು ಸಲ್ಲಿಸಿಲ್ಲ;

5. ಬಾಡಾ ಗ್ರಾಮದ ಸರ್ವೆ ನಂ.54/7 ವಿಸ್ತೀರ್ಣ 2.04 ಎಕರೆ ಜಮೀನು ಶ್ರೀಮತಿ.ಲಲಿತ ಕೋಂ ರಮೇಶ ರವರ ಮಾಲೀಕತ್ವದಲ್ಲಿದ್ದು, ಸದರಿ ಕೃಷಿ ಜಮೀನನ್ನು ಕೈಗಾರಿಕೆ ಉದ್ದೇಶಕ್ಕೆ ಬಳಕೆ ಮಾಡಲು ಗ್ರಾಮ ಪಂಚಾಯತ್ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಿರಾಪೇಕ್ಷಣ ಪತ್ರ ಪಡೆಯುವಂತೆ ಸೂಚಿಸಲಾಗಿದ್ದು, ವ್ಯವಸಾಯೇತರ ಉದ್ದೇಶಕ್ಕಾಗಿ ಜಮೀನನ್ನು ಪರಿವರ್ತಿಸಿಕೊಳ್ಳದೇ ಯಾವುದೇ ಕೈಗಾರಿಕಾ ಚಟುವಟಿಕೆ ಮಾಡದಂತೆ ಭೂ ಮಾಲೀಕರಿಗೆ ದಿನಾಂಕ:09/09/17ರಂದು ಬಂಕಾಪುರ ಕಂದಾಯ ನಿರೀಕ್ಷಕರು ನೋಟೀಸ್ ನೀಡಿದ್ದಲ್ಲದೇ, ತಮ್ಮ ಕಛೇರಿಯಿಂದಲೂ ದಿನಾಂಕ:04/10/17 ಮತ್ತು 02/02/18 ರಂದು ನೋಟೀಸ್ ನೀಡಿದೆ. ಸದರಿ ಜಮೀನಿನಲ್ಲಿ ಯಾವುದೇ ಕಲ್ಲು ಗಣಿಗಾರಿಕೆ ನಡೆಯುತ್ತಿಲ್ಲ. ಸದರಿ ಜಮೀನಿನಲ್ಲಿ ಸ್ಟೋನ್ ಕ್ರಷ್ಷ್ ಜಲ್ಲಿ ಸ್ಥಾಪಿಸಲು ಭೂ ಮಾಲೀಕರು ದಿನಾಂಕ:15/09/15ರಂದು ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ರವರಿಂದ ನಿರಾಪೇಕ್ಷಣಾ ಪತ್ರ ಪಡೆದಿದ್ದಾರೆ. ಸದರಿ ಜಮೀನು ಕೃಷಿಗೆ ಯೋಗ್ಯವಾಗಿಲ್ಲವಾದ್ದರಿಂದ ಹಾಗೂ ಪರವಾನಗಿ ಪಡೆದ ಸರ್ವೆ ನಂ.54/3ಕ್ಕೆ ಹೊಂದಿಕೊಂಡಿರುವುದರಿಂದ, ಸದರಿ ಜಮೀನಿನಲ್ಲಿ

ಹೊಸದಾಗಿ ಕಲ್ಲು ಪುಡಿ ಮಾಡುವ ಯಂತ್ರ (ಕ್ರಷರ್) ಹಾಕಲು ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಪರವಾನಗಿ ಮತ್ತು ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷರಾದ ಹಾವೇರಿ ಜಿಲ್ಲಾಧಿಕಾರಿಗಳಲ್ಲಿ ಸಲ್ಲಿಸಿದ ಅರ್ಜಿಯ ಕುರಿತು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯರು ಸ್ಥಳ ತಪಾಸಣಾ ವರದಿ ದಿನಾಂಕ:10/09/14ರನ್ವಯ ಷರತ್ತಿಗೊಳಪಟ್ಟು ಜಿಲ್ಲಾಧಿಕಾರಿಗಳು ನಮೂನೆ-ಬಿ1 ಅನ್ನು ಅನುಮೋದಿಸಿದ್ದಾರೆ. ಸದರಿ ನಮೂನೆ-ಬಿ1 ಅನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಾವೇರಿ ರವರಿಗೆ ಸಲ್ಲಿಸಿ, ಕನ್‌ಸೆಂಟ್ ಫಾರ್ ಆಪರೇಷನ್ ಪಡೆಯಲು ಭೂ ಮಾಲೀಕರಿಗೆ ದಿನಾಂಕ:03/09/15ರಂದು ಸೂಚಿಸಲಾಗಿದೆ. ಅದರಂತೆ, ಅವರು ದಿನಾಂಕ:01/06/17ರಂದು ಆದೇಶ ಪಡೆದುಕೊಂಡಿದ್ದಾರೆ;

6. ದಿನಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದಂತೆ ವ್ಯಾಪ್ತಿಯ ಕಂದಾಯ ನಿರೀಕ್ಷಕರು, ಉಪ ತಹಶೀಲ್ದಾರರು ಮತ್ತು ಬಾಡಾ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯಿಂದ ವರದಿ ಪಡೆದುಕೊಂಡು ಪರವಾನಗಿ ಇಲ್ಲದೇ, ಸರ್ವೆ ನಂ.54/7ರಲ್ಲಿ ಕಲ್ಲು ಪುಡಿ ಮಾಡುವ ಯಂತ್ರ ಹಾಕಿರುವುದನ್ನು ತಕ್ಷಣ ಮುಚ್ಚಬೇಕೆಂದು, ತಪ್ಪಿದ್ದಲ್ಲಿ ಭೂ ಕಂದಾಯ ಕಾಯಿದೆ ಅಡಿ ಕ್ರಮ ಜರುಗಿಸಲಾಗುವುದೆಂದು ಮತ್ತು ಎಫ್‌ಐಆರ್ ದಾಖಲಿಸಲಾಗುವುದೆಂದು ನೋಟೀಸ್‌ಗಳನ್ನು ನೀಡಿದೆ. ದಿನಾಂಕ:03/02/18 ರಂದು ಜಮೀನಿಗೆ ಭೇಟಿ, ಬಂದ್ ಮಾಡಿಸಿ, ಸದರಿ ಜಮೀನಿನಲ್ಲಿ ಇರುವ ವಿದ್ಯುತ್ ಕೋಣೆಗೆ ಬೀಗ ಹಾಕಿ, ಮೊಹರು ಹಾಕಿದೆಯೆಂದು ದಿನಾಂಕ:05/02/18ರಂದು ತಮ್ಮ ಕಾರ್ಯಾಲಯಕ್ಕೆ ಉಪ ತಹಶೀಲ್ದಾರರು ಮತ್ತು ಬಾಡಾ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಗಳು ವರದಿ ಸಲ್ಲಿಸಿದ್ದಾರೆ. ತಾವು ಯಾವುದೇ ರೀತಿಯಲ್ಲಿ ಸರ್ಕಾರದ ಕೆಲಸದಲ್ಲಿ ನಿಷ್ಕಾಳಜಿ, ಬೇಜವಾಬ್ದಾರಿತನ ತೋರಿಲ್ಲ, ಪರವಾನಗಿ ಇಲ್ಲದೇ, 7-8 ವರ್ಷಗಳಿಂದ ಸರ್ವೆ ನಂ.54/3ರಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆಂದು ಸಲ್ಲಿಸಿದ ದೂರು ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

7. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

8. ಒಂದನೇ ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ-

ಅನಧಿಕೃತ ಗಣಿಗಾರಿಕೆಯಲ್ಲಿ ಭೂಮಿ ಸ್ಫೋಟಕದ ಬಳಕೆಯಿಂದಾಗಿ ಹತ್ತಿರದ ಬಂಕನಾಥ ದೇವಸ್ಥಾನ ಹಾಗೂ ಕನಕದಾಸರ ಅರಮನೆ ಪ್ರದೇಶದ ಕಟ್ಟಡಗಳ ನಿರಂತರ ಹಾನಿಗೆ ಕಾರಣವಾಗಿದೆ. ಅಲ್ಲದೇ, ಸ್ಫೋಟಕದಿಂದಾಗಿ ಗ್ರಾಮದ ಮನೆಗಳು ಅದರುತ್ತಿದ್ದ ಕಾರಣ, ಜನರು ಆತಂಕಕ್ಕೊಳಗಾಗಿ ಗ್ರಾಮ ಪಂಚಾಯತ್‌ಗೆ ಲಿಖಿತ ದೂರನ್ನು ಸಲ್ಲಿಸಿದ್ದಾರೆಂದು ಹೇಳಿದ್ದಾರೆ.

9. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ: ಶಿಗ್ಗಾಂವ ತಾಲ್ಲೂಕ್ ಬಾಡಾ ಗ್ರಾಮದ ಸರ್ವೆ ನಂ.54/3 ವಿಸ್ತೀರ್ಣ 4 ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಬಳಸಲು ಭೂ ಮಾಲೀಕರಾದ ಶ್ರೀ.ರಮೇಶ ವೀರಭದ್ರಪ್ಪ ತೆಗ್ಗಳ್ಳಿ ರವರಿಗೆ ಅನುಮತಿಸಿ, ಏಪ್ರಿಲ್, 2011 (ದಿನಾಂಕ ಅಸ್ಪಷ್ಟ)ರಲ್ಲಿ ಹಾವೇರಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ. ಜಿಲ್ಲಾಧಿಕಾರಿಗಳಿಂದ ಅನ್ಯಕ್ರಾಂತ ಆದೇಶ ಪಡೆಯುವ ಮೊದಲೇ ದಿನಾಂಕ:17/01/11ರಂದು ಬಾಡಾ ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಯವರು ಭೂ ಮಾಲೀಕರಿಗೆ "ಪ್ರಮಾಣ ಪತ್ರ" ನೀಡಿದ್ದಾರೆ;

10. ಸದರಿ ಸರ್ವೆ ನಂ.54/3ರಲ್ಲಿ 4 ಎಕರೆ ಪೈಕಿ 3 ಎಕರೆ ಪ್ರದೇಶದಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯನ್ನು ನಡೆಸಲು 5 ವರ್ಷಗಳ ಅವಧಿಗೆ ಪರವಾನಗಿ ಕೋರಿ ಸದರಿ ಶ್ರೀ.ರಮೇಶ ವೀರಭದ್ರಪ್ಪ ತೆಗ್ಗಳ್ಳಿ ರವರು ದಿನಾಂಕ:01/07/14ರಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ರವರಿಗೆ ಅರ್ಜಿಯನ್ನು ಸಲ್ಲಿಸಿದೆ. ದಿನಾಂಕ:22/09/15 ರಿಂದ 10 ವರ್ಷಗಳ ಅವಧಿಗೆ ಸದರಿ ಜಮೀನಿನಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯನ್ನು ನಡೆಸಲು ಪರವಾನಿಗೆ ಸಂಖ್ಯೆ:110ನ್ನು ಭೂ ಮಾಲೀಕರಿಗೆ ನೀಡಿರುವುದು ದಿನಾಂಕ:22/09/15ರ ಪತ್ರದಲ್ಲಿ ಹಿರಿಯ ಭೂ ವಿಜ್ಞಾನಿಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ರವರ ಪತ್ರದಲ್ಲಿ ಕಂಡು ಬಂದಿದೆ;

11. ಬಾಡಾ ಗ್ರಾಮದ ಸರ್ವೆ ನಂ.54/7 ವಿಸ್ತೀರ್ಣ 2 ಎಕರೆ ಜಮೀನು ಶ್ರೀಮತಿ.ಲಲಿತಾ ಕೋಂ ರಮೇಶ ತೆಗ್ಗಳ್ಳಿ ರವರ ಹೆಸರಿನಲ್ಲಿದೆ ಎಂದು ಹೇಳಿದ್ದು, 2016–17ನೇ ಸಾಲಿನ ಪಹಣಿ ಸದರಿಯವರ ಹೆಸರಿನಲ್ಲಿದೆ. ಸದರಿ ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಪರಿವರ್ತಿಸಿಕೊಳ್ಳದೇ ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಾಲಯ ದಿಂದ ದಿನಾಂಕ:15/09/15ರ ಉದ್ದಿಮೆದಾರರ ಜ್ಞಾಪನ

ವಿವರಣಾ ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ದಿನಾಂಕ:01/06/17ರ ಕನ್‌ಸೆಂಟ್ ಫಾರ್ ಆಪರೇಷನ್ ಪಡೆದು ಮೆ॥ಶ್ರೀ ಅನಿಲ್ ರಮೇಶ್ ತೆಗ್ಗಿಹಳ್ಳಿ ಸ್ಟೋನ್ ಕ್ರಷಿಂಗ್ ಇಂಡಸ್ಟ್ರೀ ಕಲ್ಲು ಪುಡಿ ಮಾಡುವ ಘಟಕವನ್ನು ಪ್ರಾರಂಭಿಸಿರುವುದು ಕಂಡು ಬಂದಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಿದ ಕನ್‌ಸೆಂಟ್ ಫಾರ್ ಆಪರೇಷನ್ ದಿನಾಂಕ:30/09/17ರವರೆಗೆ ಮಾತ್ರ ಮಾನ್ಯತೆಯನ್ನು ಹೊಂದಿದೆ. ಕಲ್ಲು ಪುಡಿ ಘಟಕವು 'ಕೇಸರಿ ಪ್ರವರ್ಗ' ಕ್ಕೆ ಸೇರಿದ ಉದ್ದಿಮೆಯಾಗಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕನ್‌ಸೆಂಟ್ ಫಾರ್ ಆಪರೇಷನ್ ಅನ್ನು ದಿನಾಂಕ:01/06/17ರಂದು ಪಡೆದ ನಂತರ, ಸದರಿ ಉದ್ದಿಮೆ \ ಘಟಕ ವನ್ನು ಸ್ಥಾಪಿಸಲು ಬಾಡಾ ಗ್ರಾಮ ಪಂಚಾಯತ್‌ನಿಂದ ಪರವಾನಗಿಯನ್ನು ಪಡೆಯದೇ ಇರುವುದು ಕಂಡು ಬಂದಿದೆ;

12. ಎರಡನೇ (2ನೇ) ಎದುರುದಾರರು ಹಾವೇರಿ ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಪರವಾನಗಿ ಮತ್ತು ನಿಯಂತ್ರಣ ಪ್ರಾಧಿಕಾರ, ಹಾವೇರಿಯ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ಕರ್ನಾಟಕ ಕಲ್ಲು ಪುಡಿ ನಿಯಂತ್ರಣ ಕಾಯಿದೆ, 2011 (THE KARNATAKA REGULATION OF STONE CRUSHERS ACT, 2011)ರ ಕಲಂ 8ರನ್ವಯ ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರವರು ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಪರವಾನಗಿ ಮತ್ತು ನಿಯಂತ್ರಣ ಪ್ರಾಧಿಕಾರ, ಹಾವೇರಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಸದರಿ ಕಾಯಿದೆಯ ಕಲಂ 9ರನ್ವಯ ಜಿಲ್ಲೆಯ ಪ್ರತಿಯೊಂದು ಕಲ್ಲು ಪುಡಿ ಮಾಡುವ ಘಟಕಗಳನ್ನು ಕನಿಷ್ಠ ಪಕ್ಷ ವರ್ಷಕ್ಕೊಮ್ಮೆಯಾದರೂ ಪರಿವೀಕ್ಷಣೆ ಮಾಡಿ, ಪ್ರಾಧಿಕಾರದ ಅಧ್ಯಕ್ಷರಿಗೆ ವರದಿಯನ್ನು ಸಲ್ಲಿಸತಕ್ಕದ್ದು. ಬಾಡಾ ಗ್ರಾಮದ ಸರ್ವೆ ನಂ.54/7ರಲ್ಲಿ ಸ್ಥಾಪನೆಯಾದ ಮೆ॥ಶ್ರೀ ಅನಿಲ್ ರಮೇಶ್ ತೆಗ್ಗಿಹಳ್ಳಿ ಸ್ಟೋನ್ ಕ್ರಷಿಂಗ್ ಇಂಡಸ್ಟ್ರೀ ಕಲ್ಲು ಪುಡಿ ಮಾಡುವ ಘಟಕಕ್ಕೆ 2ನೇ ಎದುರುದಾರರು ಭೇಟಿ ನೀಡಿ ಪರಿವೀಕ್ಷಣೆ ಮಾಡಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ;

13. ಅನುಮತಿ ಪಡೆಯದೇ ಯಾವುದೇ ಕೃಷಿ ಭೂಮಿಯನ್ನು ಇತರೆ ಉದ್ದೇಶಕ್ಕಾಗಿ ಉಪಯೋಗಿಸುವುದು ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 96ರಡಿ ದಂಡನಾರ್ಹವಾಗಿದ್ದು, ಸರ್ವೆ ನಂ.54/7 ವಿಸ್ತೀರ್ಣ 2 ಎಕರೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲು ಅನ್ಯಕ್ರಾಂತ

ಆದೇಶ ಪಡೆಯದೇ, ಕಲ್ಲು ಪುಡಿ ಮಾಡುವ ಘಟಕವನ್ನು ಸ್ಥಾಪಿಸಿದ ಬಗ್ಗೆ ಸಂಬಂಧಪಟ್ಟ ಗ್ರಾಮ ಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರಿಂದ ವರದಿ ಪಡೆದು ಜಿಲ್ಲಾಧಿಕಾರಿಗಳಿಗೆ ವರದಿಯನ್ನು 1ನೇ ಎದುರುದಾರರು ಸಲ್ಲಿಸಿಲ್ಲ. ಕಾರಣ, 1 ಮತ್ತು 2ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

14. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ಮತ್ತು 2ನೇ ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

15. ಅದಲ್ಲದೆ, 2ನೇ ಎದುರುದಾರ **ಶ್ರೀ ಶ್ರೀನಿವಾಸ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಜಿಲ್ಲೆ** ರವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಲಾಗಿ ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (2)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ

ನಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮ ವಿರುದ್ಧ ಈ ಮೇಲ್ಕಂಡ ಆಪಾದನೆ.**

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 13/09/2019 ರಂದು ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 18/11/2019 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ದೂರುದಾರರು ತಮ್ಮ ದೂರಿನಲ್ಲಿ ತಿಳಿಸಿರುವಂತೆ ಶ್ರೀ ರಮೇಶ ವಿ. ತೆಗ್ಗಿಹಳ್ಳಿ ಇವರಿಗೆ ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲ್ಲೂಕಿನ, ಬಾಡಗ್ರಾಮದ ರಿ.ಸ. ನಂ. 54/3 ರಲ್ಲಿ 3.00 ರಲ್ಲಿ ದಿನಾಂಕ 22/09/2015 ರಿಂದ ಜಾರಿಗೆ ಬರುವಂತೆ 10 ವರ್ಷಗಳ ಅವಧಿಗೆ ಕಲ್ಲು ಗಣಿಗುತ್ತಿಗೆ ಮಂಜೂರಾತಿ ನೀಡಲಾಗಿರುತ್ತದೆ, ಗುತ್ತಿಗೆದಾರರು ತಮ್ಮ ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಕಾರ್ಯನಿರ್ವಹಿಸಿದ್ದು ಗುತ್ತಿಗೆದಾರರು 2017-18 ಸಾಲಿನವರೆಗೆ ಒಟ್ಟು 10,900 ಮೆ.ಟನ್ ಗಳಷ್ಟು ಕಟ್ಟಡಕಲ್ಲು ಸಾಗಾಣಿಕೆ ಮಾಡಿ ಅದಕ್ಕೆ ತಗಲುವ ರಾಜಧನವನ್ನು ಪಾವತಿಸಿರುತ್ತಾರೆಂದು ಹಾಗೆಯೇ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಬಾಡ ಗ್ರಾಮದ ರಿ.ಸ.ನಂ. 54/1 ರಲ್ಲಿ ಶ್ರೀ ಅನಿಲ್ ರಮೇಶ್ ತೆಗ್ಗಿಹಳ್ಳಿ ಇವರು ಕ್ರಷರ್ ಘಟಕಕ್ಕೆ ಅರ್ಜಿ ಸಲ್ಲಿಸಿರುತ್ತಾರೆ., ಸದರಿ ಅರ್ಜಿಗೆ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಪ್ರಾಧಿಕಾರದಿಂದ ದಿನಾಂಕ 02.09.2015 ರಂದು ನಮೂನೆ ಬಿ1 ನ್ನು ಅದ್ಯಕ್ಷರು, ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣಾ ಸಮಿತಿ ಹಾವೇರಿ ಇವರು

ನೀಡಿರುತ್ತಾರೆಂದು, ತಾವು ನಿಯಮಾನುಸಾರ ಕ್ರಮವಹಿಸಿದ್ದು, ಯಾವುದೇ ಕರ್ತವ್ಯ ನಿರ್ಲಕ್ಷತೆ ಎಸಗಿರುವುದಿಲ್ಲವೆಂದು ತಮ್ಮನ್ನು ದೋಷಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ **ಶ್ರೀ ಬಸವರಾಜ ಮಲ್ಲೇಶಪ್ಪ ಹೊನ್ನಣ್ಣವರ** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 4** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 16/08/2021 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆಪಾದಿತ ಸರ್ಕಾರಿ ನೌಕರ **ಶ್ರೀ ಶ್ರೀನಿವಾಸ,** ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಜಿಲ್ಲೆ ರವರು ತಮ್ಮ ಪರವಾಗಿ ತಾವೆ ಡಿ.ಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿದಿದ್ದು **ನಿ.ಡಿ.–1 ರಿಂದ ನಿ.ಡಿ–9** ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರ ಶ್ರೀ ಬಸವರಾಜ ಮಲ್ಲೇಶಪ್ಪ ಹೊನ್ನಣ್ಣವರ** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 4** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14. ಪಿ.ಡಬ್ಲ್ಯೂ–1 ದೂರುದಾರ **ಶ್ರೀ ಬಸವರಾಜ ಮಲ್ಲೇಶಪ್ಪ ಹೊನ್ನಣ್ಣವರ** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು ಶಿಗ್ಗಾವಿಯಲ್ಲಿ ವಾಸವಾಗಿದ್ದು, ಆಪಾದಿತ ಸರ್ಕಾರಿ ನೌಕರರು ತನಗೆ ಪರಿಚಯವಿದ್ದು, ಸದರಿಯವರು ನಮ್ಮ ತಾಲ್ಲೂಕಿನ ಹಾವೇರಿ ಜಿಲ್ಲೆಯಲ್ಲಿ ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ರಮೇಶ್ ತಗ್ಗೆಹಳ್ಳಿರವರು ಬಾಡ ಗ್ರಾಮದ ಸರ್ವೆ ನಂ.54/3 ರ 4 ಎಕರೆಗೆ ಮಾಲೀಕರಾಗಿದ್ದು ಸದರಿ ಜಮೀನಿನಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದರು. ಈ ಸಂಬಂಧ ಸಾರ್ವಜನಿಕರಿಂದ ಆಕ್ಷೇಪಣೆ ಬಂದಾಗ ನಾನು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದಾಗ ಅಕ್ರಮ ಗಣಿಗಾರಿಕೆ ಮಾಡುತ್ತಿರುವುದು ಕಂಡು ಬಂದಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ.

15. ಪಿ.ಡಬ್ಲ್ಯೂ-1 ದೂರುದಾರ **ಶ್ರೀ ಬಸವರಾಜ ಮಲ್ಲೇಶಪ್ಪ ಹೊನ್ನಣ್ಣವರ** ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತಾನು ಕಂದಾಯ ಇಲಾಖೆಯ ಹಾಗೂ ಗಣಿ ಇಲಾಖೆ ಕಛೇರಿಗೆ ತೆರಳಿ ಗಣಿಗಾರಿಕೆ ಮಾಹಿತಿಯನ್ನು ಇಲಾಖೆಯಿಂದ ಪಡೆದು ಪರಿಶೀಲಿಸಿ ಅನಧಿಕೃತ ಚಟುವಟಿಕೆ ಇದೆ ಎಂದು ನಾನು ಸ್ವಯಂ ಆಗಿ ತಿಳಿದುಕೊಂಡಿರುತ್ತೇನೆ. ತದನಂತರ ಹಾವೇರಿಯ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮುಖ್ಯಸ್ಥರು ಡಿಜಿಓರವರನ್ನು ಭೇಟಿಯಾಗಿ ಸದರಿ ಗಣಿಗಾರಿಕೆ ಅನುಮತಿ ನೀಡಲಾಗಿದೆಯೋ ಇಲ್ಲವೋ ಎಂಬದನ್ನು ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿ ಪಡೆದುಕೊಂಡೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ಅನಧಿಕೃತ ಚಟುವಟಿಕೆ ನಡೆಯುತ್ತಿರುವುದು ಕಂಡುಬಂತು. ಈ ಕುರಿತು ತಹಶೀಲ್ದಾರರ ಗಮನಕ್ಕೆ ತಂದು ಮೌಖಿಕವಾಗಿ ವಿಚಾರವನ್ನು ತಿಳಿಸಿದೆ. ನಂತರ ಅವರು ಸದರಿ ಮಾಲೀಕರಿಗೆ ನೋಟೀಸ್ ಜಾರಿಮಾಡಿರುವುದಾಗಿ ತಿಳಿಸಿ ಪ್ರತಿಯನ್ನು ನನಗೆ ನೀಡಿದರು. ಸದರಿ ವಿಚಾರದಲ್ಲಿ ನೋಟಿಸ್ ನೀಡಿ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

16. **ಪಿ.ಡಬ್ಲ್ಯೂ-1 ದೂರುದಾರರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ,** ಸರ್ವೆ ನಂ.54/7ರ ಭೂಮಿಗೆ ರಮೇಶ ತೆಗ್ಗಿಹಳ್ಳಿರವರ ಹೆಂಡತಿ ಲಲಿತ ಮಾಲೀಕರಾಗಿರುತ್ತಾರೆ. ಸರ್ವೆ ನಂ.54/3 ರಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿದರು. ಸರ್ವೆ ನಂ.54/7ರಲ್ಲಿ ಕಲ್ಲು ಪುಡಿ ಮಾಡುವ ಯಂತ್ರವನ್ನು ಅಳವಡಿಸಿದ್ದರು. ಸರ್ವೆ ನಂ.54/7ನ್ನು ಪಹಣಿಯಲ್ಲಿ ಕೃಷಿ ಭೂಮಿ ಎಂದು ಇದ್ದು, ಭೂ ಪರಿವರ್ತನೆ ಆಗಿಲ್ಲ. ಸದರಿ ಗಣಿಗಾರಿಕೆ ನಡೆಯುತ್ತಿದ್ದ ಸ್ಥಳಕ್ಕೆ ಹೊಂದಿಕೊಂಡಂತೆ ಬಂಕನಾಥ ದೇವಸ್ಥಾನ ಇದ್ದು ಪಕ್ಕದಲ್ಲಿ ಕೆರೆ ಇತ್ತು. ಸದರಿ ಕಲ್ಲು ಗಣಿಕಾರಿಕೆಗೆ ಸ್ಫೋಟಕಗಳನ್ನು ಬಳಸುತ್ತಿದ್ದರಿಂದ ಜೀವ ಹಾನಿ ಮತ್ತು ಪರಿಸರ ಮಾಲಿನ್ಯ ಆಗುತ್ತಿದ್ದು, ಕಛೇರಿಗೆ ದೂರು ಸಲ್ಲಿಸಿದ ನಂತರ ಕಲ್ಲು ಗಣಿಗಾರಿಕೆ ನಡೆಸಲು ಪ್ರಾಧಿಕಾರದಿಂದ ಅನುಮತಿ ಪಡೆದಿರುತ್ತಾರೆ. ಕಲ್ಲು ಗಣಿಗಾರಿಕೆ ಸುಮಾರು 6-7 ವರ್ಷದಿಂದ ನಡೆಯುತ್ತಿದೆ. ಸದರಿಯಿಂದ ಸರ್ಕಾರಕ್ಕೆ ರಾಜಸ್ವ ನಷ್ಟವಾಗಿರುತ್ತದೆ. ಸದರಿ ಗಣಿಗಾರಿಕೆ ಸಂಬಂಧ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

17. **ಪಿ.ಡಬ್ಲ್ಯೂ–1 ದೂರುದಾರರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ,** ನಾನು ನೀಡಿದ ದೂರು, ಪ್ರಪತ್ರ–1 ಮತ್ತು ಪ್ರಪತ್ರ–2 **ನಿ.ಪಿ–1 ರಿಂದ 3** ಎಂದು ಹಾಗೂ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರ್.ಟಿ.ಐನಲ್ಲಿ ದಾಖಲೆಗಳನ್ನು ಪಡೆದುಕೊಂಡಿದ್ದು, ಅವುಗಳನ್ನು ಪುಟ ಸಂಖ್ಯೆ:–6–44 ಇದ್ದು, ಒಟ್ಟಾಗಿ ***ನಿಪಿ–4*** ಎಂದು ಗುರುತಿಸಲಾಗಿರುತ್ತದೆ. ಈ ಬಗ್ಗೆ ಕರ್ತವ್ಯ ನಿರ್ಲಕ್ಷ್ಯ ಮಾಡಿದ ಡಿಜಿಓ ಮೇಲೆ ಕಾನೂನು ಕ್ರಮ ಜರುಗಿಸಬೇಕಾಗಿ ಕೋರಿ ಸಾಕ್ಷ್ಯ ನುಡಿದಿರುತ್ತಾರೆ.

18. ಆಪಾದಿತ ಸರ್ಕಾರಿ ನೌಕರ **ಶ್ರೀ ಶ್ರೀನಿವಾಸ,** ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಜಿಲ್ಲೆರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ವಿಚಾರಣೆ ಮಾಡಿಕೊಂಡು **ನಿ.ಡಿ–1 ರಿಂದ 9** ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ದಿನಾಂಕ 21.01.2017 ರಿಂದ 02.03.2018 ಹಾಗೂ ದಿನಾಂಕ 01.06.2018 ರಿಂದ 04.12.2018 ರವರೆಗೆ ಹಿರಿಯ ಭೂವಿಜ್ಞಾನಿ (ಪ್ರಭಾರ) ಹಾವೇರಿ ಜಿಲ್ಲೆ ಆಗಿ ಕರ್ತವ್ಯ ನಿರ್ವಹಿಸಿರುವುದಾಗಿ ತಾನು ಬರುವ ಪೂರ್ವದಲ್ಲಿಯೇ ಕ್ರಷರ್ ಸ್ಥಾಪಿಸಲು ಲೈಸನ್ಸ್‌ನ್ನು ಜಿಲ್ಲಾ ಕಲ್ಲುಪುಡಿ ಮಾಡುವ ನಿಯಂತ್ರಣ ಸಮಿತಿ, ಹಾವೇರಿ ರವರು ನೀಡಿದ್ದು, ದೂರುದಾರರು ತನ್ನ ವಿರುದ್ಧ ನೀಡಿರುವ ದೂರು ಆಧಾರ ರಹಿತವಾಗಿರುತ್ತದೆಂದು ತಿಳಿಸಿರುತ್ತಾರೆ.

19. ಡಿಡಬ್ಲ್ಯೂ–1 ಆಪಾದಿತ ಸರ್ಕಾರಿ ನೌಕರರನ್ನು ಮಂಡನಾಧಿಕಾರಿಯವರು ಪಾಟೀ ಸವಾಲು ಮಾಡಲಾಗಿ ಈ ಕೆಳಕಂಡಂತೆ ನುಡಿದಿರುತ್ತಾರೆ :

> **" ಗಣಿಗಾರಿಕೆ ನಡೆಯುತ್ತಿರುವ ಸ್ಥಳದ ಪಕ್ಕದಲ್ಲಿಯೇ ಒಂದು ಬಂಕನಾಥ ದೇವಸ್ಥಾನ ಮತ್ತು ಒಂದು ಕೆರೆ ಇರುತ್ತದೆ ಎಂದರೆ ಸರಿ. ಗಣಿಗಾರಿಕೆ ನಡೆಸಲು ಸ್ಫೋಟಕಗಳನ್ನು ಬಳಸುತ್ತಿದ್ದರಿಂದ, ಜೀವಹಾನಿ ಮತ್ತು ಪರಿಸರ ಮಾಲಿನ್ಯ ಉಂಟಾಗುತ್ತಿತ್ತು ಎಂದರೆ, ಸರಿಯಲ್ಲ. ದೂರುದಾರರು ದೂರು ಸಲ್ಲಿಸುವ 6–7 ವರ್ಷ ಪೂರ್ವದಿಂದಲೇ ಅಕ್ರಮ ಗಣಿಗಾರಿಕೆ ನಡೆಯುತ್ತಿತ್ತು ಎಂದರೆ, ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರು ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ**

ಉಂಟಾಗಿರುತ್ತದೆ ಎಂದರೆ, ಸರಿಯಲ್ಲ. ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೂ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿದ್ದರೂ ನಾನು ಯಾವುದೇ ಕ್ರಮ ಜರುಗಿಸಿಲ್ಲ ಎಂದರೆ, ಸರಿಯಲ್ಲ. ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿಲ್ಲ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ, ಸರಿಯಲ್ಲ ".

"ದಿನಾಂಕ: 08-09-2015 ರಂದು ಕಲ್ಲುಪುಡಿ ಮಾಡುವ ಘಟಕ ಯಂತ್ರ ಸ್ಥಾಪನೆಗೆ ಶ್ರೀ ರಮೇಶ್ ತೆಗ್ಗಳ್ಳಿರವರಿಗೆ ನೀಡಿದ ಬಗ್ಗೆ ಸಾಕ್ಷಿಯಲ್ಲಿ ನಮೂದಿಸಿರುತ್ತೇನೆ ಎಂದರೆ, ಸಾಕ್ಷಿಯು ನಮೂದಿಸಿದ್ದರೂ ಸಹ ಪರವಾನಿಗೆ ನೀಡಿದ್ದು ಶ್ರೀ ಅನಿಲ್ ತೆಗ್ಗಳ್ಳಿರವರಿಗೆ. 2015 ರಿಂದ 2018ನೇ ಸಾಲಿನವರೆಗೆ ಕಲ್ಲುಗಣಿಗಾರಿಕೆ ಮಾಡಿದ ಬಗ್ಗೆ ರಾಜಸ್ವ ಹಣ ನೀಡಿದ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ, ಸರಿ. ಆ ಬಗ್ಗೆ ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ ಎಂದರೆ, ಸರಿ. 2015 ರಿಂದ 2018 ರವರೆಗಿನ ರಾಜಸ್ವವನ್ನು ಸರ್ಕಾರಕ್ಕೆ ಯಾವ ಯಾವ ತಾರೀಖಿನಂದು ಕಟ್ಟಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಅಕ್ರಮ ಗಣಿಗಾರಿಕೆ ಮಾಡುತ್ತಿದ್ದ ರಮೇಶ್ ಈ ತೆಗ್ಗಿಳ್ಳಿರವರು 2015ರಿಂದ ಯಾವುದೇ ರಾಜಸ್ವವನ್ನು ಕಟ್ಟಿರುವುದಿಲ್ಲವಾದ ಕಾರಣ ನಾನು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಎಂದರೆ, ಸರಿಯಲ್ಲ. ಸದರಿಯವರು 2015ರಿಂದ ಮುಂಚಿನಿಂದಲು ಅಕ್ರಮ ಗಣಿಗಾರಿಕೆ ಮಾಡುತ್ತಾ ಬಂದಿದ್ದರು ಎಂದರೆ, ಸರಿಯಲ್ಲ".

"ಭೂಪರಿವರ್ತನೆ ಆಗದ ಭೂಮಿಯಲ್ಲಿ ಕ್ರಷರ್ ಮೆಷಿನ್‌ಗೆ ಅನುಮತಿ ನೀಡಿರುವುದೂ ಸಹ ಕರ್ತವ್ಯ ಲೋಪ ಆಗಿರುತ್ತದೆ ಎಂದರೆ, ಸದರಿ ಘಟನೆಯು ನನ್ನ ಅವಧಿಯಲ್ಲಿ ಆಗಿರುವುದಿಲ್ಲ. ನಾನು ನನ್ನ ಪ್ರಮಾಣ ಪತ್ರದ ಪ್ಯಾರಾ 17ರಲ್ಲಿ ನಾನು ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವಲ್ಲಿ ಆಗಿಂದಾಗ್ಗೆ ದಾಳಿ ನಡೆಸಿ ಅಕ್ರಮ

ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ಮಾಡುತ್ತಿದ್ದವರ ಮೇಲೆ ಮೊಕದ್ದಮೆ ದಾಖಲಿಸಿರುತ್ತೇನೆ ಎಂದು ಸುಳ್ಳು ನಮೂದಿಸಿರುತ್ತೇನೆ ಎಂದರೆ, ಸರಿಯಲ್ಲ. ಸದರಿ ಅಂಶಗಳನ್ನು ಸರಿಯೆಂದು ಸಾಬೀತುಪಡಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ".

" ಕಲ್ಲುಪುಡಿ ಮಾಡುವ ಘಟಕಕ್ಕೆ ನನ್ನ ಅವಧಿಯಲ್ಲಿ ಎಷ್ಟು ಬಾರಿ ಭೇಟಿ ಕೊಟ್ಟಿರುತ್ತೇನೆ ಎಂದರೆ, 2-3 ಬಾರಿ ಭೇಟಿ ಕೊಟ್ಟಿರಬಹುದು. ನಾನು ಸದರಿ ಕ್ರಷರ್ ಘಟಕಕ್ಕೆ ಭೇಟಿ ಕೊಟ್ಟ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾಗಲೀ ಅಥವಾ ಯಾವುದೇ ದಾಖಲೆಯಾಗಲೀ ಇರುವುದಿಲ್ಲ. ಸದರಿ ಘಟಕಕ್ಕೆ ವರ್ಷಕ್ಕೊಂದುಬಾರಿಯಾದರೂ ಭೇಟಿ ನೀಡಿ ಪ್ರಾಧಿಕಾರದ ಅಧ್ಯಕ್ಷರಿಗೆ ವರದಿ ಸಲ್ಲಿಸಬೇಕಾಗಿದ್ದು, ಆ ಬಗ್ಗೆ ನಾನು ಕರ್ತವ್ಯಲೋಪ ಎಸಗಿರುತ್ತೇನೆ ಎಂದರೆ ಸರಿಯಲ್ಲ".

ಅಪಾದಿತ ಸರ್ಕಾರಿ ನೌಕರರರ ಪಾಟಿ ಸವಾಲನ್ನು ಪರಿಶೀಲಿಸಲಾಗಿ, ಕಲ್ಲು ಪುಡಿ ಘಟಕಕ್ಕೆ 2-3 ಬಾರಿ ಭೇಟಿ ನೀಡಿದ್ದಾಗಿ ಹಾಗೂ ಭೇಟಿ ನೀಡಿದ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಅಧ್ಯಕ್ಷರಿಗೆ ವರ್ಷಕ್ಕೊಂದು ಬಾರಿ ಆದರೂ ವರದಿ ಸಲ್ಲಿಸಬೇಕಾಗಿದ್ದು ಯಾವುದೇ ವರದಿ ಸಲ್ಲಿಸಿರುವುದಿಲ್ಲ. ಗುತ್ತಿಗೆದಾರ ಶ್ರೀ ರಮೇಶ್ ತೆಗ್ಗಿಹಳ್ಳಿ ಕಲ್ಲು ಗಣಿ ಗುತ್ತಿಗೆ 2017-18 ಸಾಲಿನ ವರೆಗೂ 10,900 ಮೆ.ಟನ್‌ಗಳಷ್ಟು ಕಟ್ಟಡಕಲ್ಲು ಸಾಗಣಿಕೆ ಮಾಡಿ ಅದಕ್ಕೆ ತಗಲುವ ರಾಜಧನವನ್ನು ಪಾವತಿಸಿರುವುದಾಗಿ ತಿಳಿಸಿದ್ದು ಪಾವತಿ ಮಾಡಿರುವ ಬಗ್ಗೆ ಅಪಾದಿತ ಸರ್ಕಾರಿ ನೌಕರರು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುವುದಿಲ್ಲ.

**20.** ಅಪಾದಿತ ಸರ್ಕಾರಿ ನೌಕರ ಶ್ರೀ ಶ್ರೀನಿವಾಸ್ ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಜಿಲ್ಲೆಯವರು ದಿನಾಂಕ 10/2/2022 ರ ತಮ್ಮ ಲಿಖಿತ ವಾದದಲ್ಲಿ ಸರ್ವೇ ನಂ. 54/7 ರಲ್ಲಿ ಯಾವುದೇ ಗಣಿಗಾರಿಕೆ ನಡೆದಿರುವುದಿಲ್ಲ ನಾನು ಹಿರಿಯ ಭೂ ವಿಜ್ಞಾನಿಯಾಗಿ

ದಿನಾಂಕ 21/1/2017 ರಿಂದ 2/3/2018 ರವರೆಗೆ ಮತ್ತು 1/6/2018 ರಿಂದ 4/12/2018 ರವರೆಗೆ ನಿಯಮಾನುಸಾರವಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಅವಧಿಯಲ್ಲಿ ಒಬ್ಬನೇ ಭೂ ವಿಜ್ಞಾನಿಯಾಗಿ ಮತ್ತು ಹಿರಿಯ ಭೂ ವಿಜ್ಞಾನಿಯಾಗಿ ಪ್ರಭಾರವನ್ನು ವಹಿಸಿಕೊಂಡು ಕಾರ್ಯ ನಿರ್ವಹಿಸಿ ಜಿಲ್ಲಾ ಮರುಳು ಸಮಿತಿ, ಟಾಸ್ಕ್ ಪೋರ್ಸ್ ಮತ್ತು ಕ್ರಷರ್ ಪ್ರಾಧಿಕಾರಿಗಳ ಸಭೆಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಮತ್ತು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಸಿರುತ್ತೇನೆ ಅಕ್ರಮ ಉಪಖನಿಜಗಳ ಗಣಿಗಾರಿಕೆ ಮತ್ತು ಸಾಗಣಿಕೆ ತಡೆಗಟ್ಟಲು ಆಗ್ಗಿಂದಾಗೇ ದಾಳಿ ನಡೆಸಿ ಅಕ್ರಮವಾಗಿ ಉಪಖನಿಜ ಗಣಿಗಾರಿಕೆ ಮತ್ತು ಸಾಗಣಿಕೆ ಮಾಡುತ್ತಿರುವವರ ಮೇಲೆ ಮೊಕದ್ದಮೆಗಳನ್ನು ದಾಖಲಿಸಿರುತ್ತೇನೆ, ಯಾವುದೇ ದುರ್ನಡತೆಗಳನ್ನು ಎಸಗಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ.

21. ಪಿ.ಡಬ್ಲ್ಯೂ-1 ರವರ ಸಾಕ್ಷ್ಯ ನಿ.ಪಿ-1 ರಿಂದ ನಿ.ಪಿ-4 ರ ದಾಖಲಾತಿಗಳು, ಆಪಾದಿತ ಸರ್ಕಾರಿ ನೌಕರ ಡಿ.ಡಬ್ಲ್ಯೂ-1 ರವರ ಸಾಕ್ಷ್ಯ ನಿ.ಡಿ-1 ರಿಂದ 9 ದಾಖಲಾತಿಗಳು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಾಗಿ, ಪಿಡಬ್ಲ್ಯೂ-1 ದೂರುದಾರರು ತಮ್ಮ ಸಾಕ್ಷ್ಯದಲ್ಲಿ, ಶ್ರೀ ರಮೇಶ್ ತಗ್ಗೆಹಳ್ಳಿರವರು ಬಾಡ ಗ್ರಾಮದ ಸರ್ವೆ ನಂ. 54/3 ರ 4 ಎಕರೆಗೆ ಮಾಲೀಕರಾಗಿದ್ದು, ಸದರಿಯವರ ಜಮೀನಿನಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರಿಂದ ಆಕ್ಷೇಪಣೆ ಬಂದಾಗ ತಾನು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದಾಗ ಅಕ್ರಮ ಗಣಿಗಾರಿಕೆ ಮಾಡುತ್ತಿರುವುದು ಕಂಡು ಬಂದಿದ್ದಾಗಿ, ನಂತರ ತಾನು ಕಂದಾಯ ಇಲಾಖೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ತೆರಳಿ ಗಣಿಗಾರಿಕೆ ಮಾಹಿತಿಯನ್ನು ಇಲಾಖೆಯಿಂದ ಪಡೆದು ಪರಿಶೀಲಿಸಿ ಅನಧಿಕೃತ ಚಟುವಟಿಕೆ ಇದೆ ಎಂದು ತಿಳಿದುಕೊಂಡು, ತದನಂತರ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮುಖ್ಯಸ್ಥರು (ಆಪಾದಿತ ಸರ್ಕಾರಿ ನೌಕರ) ರವರನ್ನು ಭೇಟಿಯಾಗಿ ಸದರಿ ಗಣಿಗಾರಿಕೆ ಅನುಮತಿ ನೀಡಲಾಗಿದೆಯೋ ಇಲ್ಲವೋ ಎಂಬುದನ್ನು ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿ ಪಡೆದುಕೊಂಡು, ಸದರಿ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅನಧಿಕೃತ ಚಟುವಟಿಕೆ (ಅಕ್ರಮ ಗಣಿಗಾರಿಕೆ) ನಡೆಯುತ್ತಿರುವುದು ಕಂಡು ಬಂದುದ್ದಾಗಿ, ಈ ಬಗ್ಗೆ ತಹಶೀಲ್ದಾರ್ ರವರನ್ನು ಭೇಟಿ

ಮಾಡಿ ಮೌಖಿಕವಾಗಿ ಅವರ ಗಮನಕ್ಕೆ ತಂದಾಗ, ಅವರು ಸದರಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಿರುವುದಾಗಿ ತಿಳಿಸಿ ಪ್ರತಿಯನ್ನು ದೂರುದಾರರಿಗೆ ನೀಡಿರುತ್ತಾರೆ.

22. ತಹಶೀಲ್ದಾರ್ ರವರು ಭೂ ಮಾಲಿಕರಿಗೆ ನೋಟಿಸ್ ನೀಡಿದ್ದು, ಆದರೆ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ, ದೂರುದಾರರು ಲೋಕಾಯುಕ್ತ ಸಂಸ್ಥೆಗೆ **ನಿ.ಪಿ–1 ರಿಂದ 3** ರಂತೆ ದೂರು ಸಲ್ಲಿಸಿದ್ದು, ಸದರಿ ದೂರಿನೊಂದಿಗೆ ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಆರ್.ಟಿ.ಐ.ನಲ್ಲಿ ಪಡೆದುಕೊಂಡು ಸಲ್ಲಿಸಿದ್ದು ಅವುಗಳನ್ನು ನಿ.ಪಿ–4 ಎಂದು ಗುರುತಿಸಲಾಗಿರುತ್ತದೆ. ಸರ್ವೆ ನಂ. 54/7 ರ ಭೂಮಿಗೆ ರಮೇಶ್ ತೆಗೆಹಳ್ಳಿರವರ ಹೆಂಡತಿ ಲಲಿತ ಮಾಲೀಕರಾಗಿದ್ದು, ಸರ್ವೆ ನಂ. 54/3 ರಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದು ಸರ್ವೆ ನಂ. 54/7 ರಲ್ಲಿ ಕಲ್ಲುಪುಡಿ ಮಾಡುವ ಯಂತ್ರವನ್ನು ಅಳವಡಿಸಿದ್ದು, ಸರ್ವೆ ನಂ. 54/7 ರ ಪಹಣಿಯಲ್ಲಿ ಕೃಷಿ ಭೂಮಿ ಎಂದು ಇದ್ದು, ಭೂಪರಿವರ್ತನೆ ಆಗಿರುವುದಿಲ್ಲ. ಸದರಿ ಗಣಿಗಾರಿಕೆ ನಡೆಯುತ್ತಿರುವ ಸ್ಥಳಕ್ಕೆ ಹೊಂದಿಕೊಂಡಂತೆ ಬಂಕನಾಥ ದೇವಸ್ಥಾನ ಇದ್ದು ಪಕ್ಕದಲ್ಲಿ ಕೆರೆ ಇದ್ದು, ಸದರಿ ಕಲ್ಲು ಗಣಿಗಾರಿಕೆಗೆ ಸ್ಫೋಟಕಗಳನ್ನು ಬಳಸುತ್ತಿದ್ದರಿಂದ ಜೀವ ಹಾನಿ ಮತ್ತು ಪರಿಸರ ಮಾಲಿನ್ಯ ಆಗಿದ್ದು, ಲೋಕಾಯುಕ್ತ ಕಛೇರಿಗೆ ದೂರು ಸಲ್ಲಿಸಿದ ನಂತರ ಕಲ್ಲು ಗಣಿಗಾರಿಕೆ ನಡೆಸಲು ಪ್ರಾಧಿಕಾರದಿಂದ ಅನುಮತಿ ಪಡೆದಿದ್ದು, ಕಲ್ಲು ಗಣಿಗಾರಿಕೆ ಸುಮಾರು 6–7 ವರ್ಷಗಳಿಂದ ನಡೆಯುತ್ತಿದ್ದು ಸದರಿಯವರಿಂದ ಸರ್ಕಾರಕ್ಕೆ ನಷ್ಟವಾಗಿರುತ್ತದೆಂದು ನುಡಿದಿರುತ್ತಾರೆ.

23. ಆಪಾದಿತ ಸರ್ಕಾರಿ ನೌಕರ ಶ್ರೀ ಶ್ರೀನಿವಾಸ, ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಜಿಲ್ಲೆ ರವರು ದಿನಾಂಕ 21.01.2017 ರಿಂದ 02.03.20918 ಹಾಗೂ 01.06.2018 ರಿಂದ 04.12.2018 ರವರೆಗೆ ಕರ್ತವ್ಯ ನಿರ್ವಹಿಸಿದ್ದು, ಸರ್ವೆ ನಂ. 54/3 ರಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ಮಾಡುತ್ತಿದ್ದು ಸರ್ವೆ ನಂ. 54/7 ರಲ್ಲಿ ಕಲ್ಲುಪುಡಿ ಮಾಡುವ ಯಂತ್ರವನ್ನು ಅಳವಡಿಸಿದ್ದು, ಸರ್ವೆ ನಂ. 54/7 ರ ಪಹಣಿಯಲ್ಲಿ ಕೃಷಿ ಭೂಮಿ ಭೂಪರಿವರ್ತನೆಯಾಗಿರದಿದ್ದರೂ, ಅಪಾದಿತ ಸರ್ಕಾರಿ ನೌಕರರು ಹಾವೇರಿ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ

ಮುಖ್ಯಸ್ಥನಾಗಿದ್ದರೂ ಸಹ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಜಾಗಕ್ಕೆ ಒಮ್ಮೆಯು ಸ್ಥಳಕ್ಕೆ ಭೇಟಿ ನೀಡಿ, ದಾಖಲೆಗಳನ್ನು ಮತ್ತು ಸ್ಥಳ ಪರಿಶೀಲಿಸದೆ, ಕಲ್ಲು ಪುಡಿ ಘಟಕಕ್ಕೆ 2–3 ಬಾರಿ ಭೇಟಿ ನೀಡಿದ್ದಾಗಿ ಹೇಳಿದ್ದು, ಭೇಟಿ ನೀಡಿದ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದಿರುವ ಬಗ್ಗೆಯಾಗಲೀ ಅಥವಾ ಭೇಟಿ ನೀಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಕಲ್ಲುಪುಡಿ ಮಾಡುವ ನಿಯಂತ್ರಣ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ವರ್ಷಕ್ಕೊಂದು ಬಾರಿ ಆದರೂ ಸ್ಥಳಕ್ಕೆ ಭೇಟಿ ನೀಡಿ ವರದಿ ಸಲ್ಲಿಸಬೇಕಾಗಿದ್ದು ಯಾವುದೇ ವರದಿ ಸಲ್ಲಿಸಿರುವುದು ಕಂಡು ಬಂದಿರುವುದಿಲ್ಲ ಹಾಗೂ ಗುತ್ತಿಗೆದಾರ ಶ್ರೀ ರಮೇಶ್ ತೆಗ್ಗಿಹಳ್ಳಿ ಕಲ್ಲು ಗಣಿ ಗುತ್ತಿಗೆ 2017–18 ಸಾಲಿನ ವರೆಗೂ 10,900 ಮೆ.ಟನ್‌ಗಳಷ್ಟು ಕಟ್ಟಡಕಲ್ಲು ಸಾಗಣಿಕೆ ಮಾಡಿ ಅದಕ್ಕೆ ತಗಲುವ ರಾಜಧನವನ್ನು ಪಾವತಿಸಿರುವುದಾಗಿ ತಿಳಿಸಿದ್ದು, ಪಾವತಿ ಮಾಡಿರುವ ಬಗ್ಗೆ ಅಪಾದಿತ ಸರ್ಕಾರಿ ನೌಕರರು ಯಾವುದೇ ದಾಖಲಾತಿಗಳನ್ನು ಸಹ ಸಲ್ಲಿಸಿರುವುದಿಲ್ಲ. ಒಟ್ಟಾರೆಯಾಗಿ ಶ್ರೀ ಶ್ರೀನಿವಾಸ, ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಜಿಲ್ಲೆ ರವರು ತಮ್ಮ ಅಧಿಕಾರದ ಅವಧಿಯಲ್ಲಿ ಬಾಡ ಗ್ರಾಮದ ಸರ್ವೆ ನಂ. 54/3 ರಲ್ಲಿ 4 ಎಕರೆ ಮತ್ತು 54/7 ರಲ್ಲಿ 2.4 ಎಕರೆ ಗಣಿ ಮಾಲೀಕರು ಯಾವುದೇ ಅನುಮತಿ ಪಡೆಯದೇ ಯಾವುದೇ ಕೃಷಿ ಭೂಮಿಯನ್ನು ಇತರೆ ಉದೇಶಕ್ಕಾಗಿ ಉಪಯೋಗಿಸುವುದು ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 96 ರಡಿ ದಂಡನಾರ್ಹವಾಗಿದ್ದು, ಸರ್ವೆ ನಂ. 54/7 ವಿಸ್ತೀರ್ಣ 2 ಎಕರೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲು ಅನ್ಯಕ್ರಾಂತ ಅದೇಶ ಪಡೆಯದೆ ಕಲ್ಲು ಪುಡಿ ಮಾಡುವ ಘಟಕವನ್ನು ಸ್ಥಾಪಿಸಿ ಅಕ್ರಮ ಕಲ್ಲು ಗಣಿಗಾರಿಕೆ ಮಾಡಿರುವ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸದೆ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿ ಕರ್ತವ್ಯಲೋಪವೆಸಗಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ–1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.

: ವಿಚಾರಣಾ ವರದಿ :

ಶಿಸ್ತು ಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರ **ಶ್ರೀ ಶ್ರೀನಿವಾಸ,** ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಜಿಲ್ಲೆ, ರವರ ವಿರುದ್ಧದ ದೋಷಾರೋಪಣೆಯಲ್ಲಿ ಮಾಡಲಾದ ಆಪಾದನೆ ಗಳನ್ನು **ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**21ನೇ ಫೆಬ್ರವರಿ 2022.**

**(ಜಿ. ನಂಜುಂಡಯ್ಯ)**
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Basavaraja Mallesh Honnannavar (complainant) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. Srinivas (DGO)-(original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1: | Copy of Form No. I (complaint) dt. 20/12/2017 (Xerox) |
| Ex.P.2 : | Form No. II (Affidavit) dt. 20/12/2017 (Xerox) |
| Ex.P.3 : | Complaint of complainant dated 20/12/2017 (Xerox) |
| Ex.P.4 : | Copies of documents obtained under RTI Act (Xerox) |
| **LIST OF EXHIBITS MARKED ON BEHALF OF DEFENSE:** | |
| Ex.D-1 : | True copy of the No Objection Certificate in respect of Sy. No 54/3 dated 14/07/2014 issued by Tahasildar, Shiggav (True Copy)) |
| Ex.D-2 : | Certified copy of the No Objection Certificate in respect of Sy. No 54/3 dated 12/11/2014 issued by Chief Conservator of Forest, Dharwad. (True Copy)) |
| Ex.D-3 : | True Copy of No Objection Certificate dated 22/05/2015 issued by Member Secretary, SEIAA, Karnataka. (True Copy)) |

| | |
|---|---|
| Ex.D-4 : | True Copy of License issued by Mines and Geology Department in respect of Sy. No. 54/3 (True Copy) |
| Ex.D-5 : | True Copy of Audit Report of Mines and Geology Department. (True Copy) |
| Ex.D-6 : | True Copy of Joint Report of , Senior Geologist, Tahasildar, Forest Department Officer and Pollution Control Board. (True Copy) |
| Ex.D-7 : | True Copy of Deputy Commissioner issued letter to start crusher in Sy. No. 54/7 (True Copy) |
| Ex.D-8 : | True Copy issued letter by Senior Geologist to start crusher in Sy. No. 54/7 (True Copy) |
| Ex.D-9 : | True Copy of consent for operation issued by Pollution Control Board |

DOR of DGO : **31.12.2037.**

**21st February 2022**

**( G. NANJUNDAIAH )**
Additional Registrar (Enquiries)-10
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/147/2019/ARE-10

Multi Storied Building,
Dr. B.R. Ambedkar Veedhi,
Bengaluru-560 001
Date: **23/02/2022**

**RECOMMENDATION**

Sub:- Departmental inquiry against;
Sri Srinivasa, Senior Geologist, Mines & Geology Department, Haveri District, Haveri – Reg.

Ref:- 1) Govt. Order No.CI 16 MGS 2019, Bengaluru dated 16/5/2019.

2) Nomination order No.UPLOK-1/DE/147/2019, Bengaluru dated 24/5/2019 of Upalokayukta-1, State of Karnataka, Bengaluru

3) Inquiry Report dated 21/02/2022 of Additional Registrar of Enquiries-10, Karnataka Lokayukta, Bengaluru

----

The Government by its order dated 16/5/2019 initiated the disciplinary proceedings against Sri Srinivasa, Senior Geologist, Mincs & Geology Department, Haveri District, Haveri (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/147/2019 Bengaluru dated 24/5/2019 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The charge against the DGO was that the DGO has failed to prevent illegal stone mining activities that were carried on in Sy. No.54/3 measuring 4 Acres and portion of Sy. No. 54/7 mcasuring 2.4 Acres at Baad Village within the limits of Bankapur Deputy

Tahsildar, Shiggaon Taluk, Haveri District and thereby committed dereliction of duty and caused loss to the State cxchequer."

4. The Inquiry Officer (Additional Registrar of Enquiries-10) on proper appreciation of oral and documentary evidence has held that the Disciplinary Authority has proved the above charge against DGO Sri Srinivasa, Senior Geologist, Mines & Geology Department, Haveri District, Haveri.

5. On re-consideration of inquiry report and taking note of the totality of the circumstances of the casc, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO, he is due to retire from service on 31/12/2037.

7. Having regard to the nature of charge proved against DGO Sri Srinivasa, Senior Geologist, Mines & Geology Department, Haveri District, Haveri, it is hereby recommended to the Government for imposing penalty of withholding three annual increments payable to DGO Sri Srinivasa with cumulative effect.

8. Action taken in the matter shall be intimated to this Authority.

Connected records are enclosed herewith.

23/2/22

**(JUSTICE B.S.PATIL)**
Upalokayukta,
State of Karnataka,
Bengaluru